# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ</u>

**ಸಿ.ಸಿ.1203/2021**

| | | | | |
|---|---|---|---|---|
| 01 | ಹೆಸರು | ರಾಮಸ್ವಾಮಿ | ಸಿ ಡಬ್ಲೂ | 2 |
| 02 | ತಂದೆಯ ಹೆಸರು | ಸಿದ್ದೇಗೌಡ | ಪಿಡಬ್ಲೂ | 2 |
| 03 | ವಯಸ್ಸು | 73 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವ್ಯವಸಾಯ | 11.11.2025 | |
| 05 | ಊರು | ಯಾಚನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾ ಸಾ 1 ಮತ್ತು 3 ರಿಂದ 5 ರವರ ಪರಿಚಯ ಇರುತ್ತದೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಯಾವುದೇ ಜಗಳವನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**</u>

ದಿಃ29.04.2021 ರಂದು ಬೆಳಗ್ಗೆ ಸುಮಾರು 7.30 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಬಳಿಯಿದ್ದಾಗ ಆರೋಪಿಗಳು ಚಾ ಸಾ 1 ರವರೊಂದಿಗೆ ಜಗಳ ತೆಗೆದು ಆ ಪೈಕಿ 1 ನೇ ಆರೋಪಿ ಅವರ ಮುಂದಲೆ ಹಿಡಿದು ಎಳೆದಾಡಿ ತಡೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಚಾ ಸಾ 1 ರವರಿಗೆ 1 ನೇ ಆರೋಪಿ ಕೈಯಿಂದ ಹೊಡೆದು ಮತ್ತು ಕೆಳಗೆ ಬಿದ್ದಾಗ ಕಾಲಿನಿಂದ ತುಳಿದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾ ಸಾ 1 ರವರಿಗೆ ತನ್ನ ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾ ಸಾ 3 ರವರು ಹೋಗಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾ ಸಾ 1 ರವರು ಪೊಲೀಸರಿಗೆ ದೂರು ಕೊಟ್ಟಿದ್ದು ಅದರಂತೆ ದಿಃ30.04.2021 ರಂದು ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಚಾ ಸಾ 1 ರವರು ತಮ್ಮಮನೆಯ ಜಗುಲಿಯಲ್ಲಿ ಕುಳಿತಿದ್ದಾಗ ಆರೋಪಿಗಳು ಬಂದು ಅವರೊಡನೆ ಜಗಳ ತೆಗೆದು 3 ನೇ ಆರೋಪಿ ಅವನನ್ನು ಹಿಡಿದುಕೊಂಡಾಗ, 4 ನೇ ಆರೋಪಿ ಅವರ ಮುಂದಲೆ ಕೂದಲನ್ನು ಹಿಡಿದು ಎಳೆದಾಡಿ, ಕೈಯಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ 1 ನೇ ಆರೋಪಿ ತನ್ನ ಬಳಿ ಇದ್ದ ಕಬ್ಬಿಣದ ಕುಡುಗೋಲಿನಿಂದ ಚಾ ಸಾ 1 ರವರ ಎಡಗೈಗೆ ಹೊಡೆದು ರಕ್ತ ಗಾಯಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು.

ನಾನು ನಿ ಪಿ 3 ರಂತೆ ಆರೋಪಿಗಳ ವಿರುದ್ಧ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳೊಂದಿಗೆ ಶಾಮಿಲಾಗಿ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿದಿರುತ್ತಾರೆ.**

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.